ಇವಳ ಹಾಡಿನ ಮೂಲಕವೇ ತಿಳಿಯಬೇಕು. ಅವಳ ಭಾವನೆಗಳೇನು, ಕನಸುಗಳೇನು, ಚಿಂತನೆಗಳೇನು... ನನ್ನ ಜೊತೆ ಸುಖವಾಗಿದ್ದಾಳಾ... ಇದೆಲ್ಲಾ ನಮ್ಮ ಬದುಕಿಗೆ ಮುಖ್ಯ ಅಂತ ಅವಳಿಗೆ ಅನ್ನಿಸಬೇಕು. ಯಾಕೆ ಅವಳಿಗೆ ಇದರ ಬಗ್ಗೆ ಪ್ರೀತಿಯಿಲ್ಲ... ಸುಂದರಂ ಯೋಚಿಸಿದ. ತಾನೂ ಕೂಡ ಇಷ್ಟು ವರುಷ ತನ್ನ ಕೆಲಸ, ಸಂಸಾರ ಅಂತ ಮುಳುಗಿಹೋಗಿದ್ದು ಸಾಕು. ಅಲ್ಲಾ... ಅಕ್ಕ ತಂಗಿಯರ ಬಾಣಂತನ, ತಮ್ಮನ ಮನೆ ಕಟ್ಟುವ ಕೆಲಸ ಎಲ್ಲ ಮುಗಿಸಿ ತಾನೂ ಒಂದು ಸಣ್ಣ ಮನೆ ಕಟ್ಟಿಕೊಂಡು ಕಣ್ಣು ಬಿಡುವ ಹೊತ್ತಿಗೆ ಮಕ್ಕಳಿಬ್ಬರೂ ಮದುವೆಗೆ ಬಂದು ನಿಂತು ಬಿಟ್ಟರಲ್ಲ!!... ಸುಮತಿ ಹೇಳುವ ಜೀವನ ಅಂದ್ರೆ ಇದೇನಾ? ಮನಸ್ಸು ಭಾರವಾಯಿತು. ನಾವು ಕಟ್ಟಿಕೊಳ್ಳುವ ಕನಸುಗಳೇನು, ಇಟ್ಟುಕೊಳ್ಳುವ ಆಸೆಗಳೇನು... ಆದರೆ, ಈ ಜೀವನ ಅನ್ನೋ ರನ್ನಿಂಗ್ ರೇಸ್‌ನಲ್ಲಿ ನಾವು ಓಡಿದ್ದು ಎಷ್ಟು ದೂರ ಅಂತ ಗೊತ್ತಾಗುವ ಹೊತ್ತಿಗೆ ಕಾಲ ಮುಗಿದೇ ಹೋಗಿಬಿಡುತ್ತಲ್ಲವೇ!! ಕಂಪೆನಿಯಲ್ಲಿ ಕೂಡ ಈಗ ಕಷ್ಟ ಅನ್ನಿಸತೊಡಗಿದೆ. ಎಲ್ಲರೂ ವಿ.ಆರ್.ಎಸ್ ತೊಗೊಳ್ತಿದ್ದಾರೆ. 'ನೀವೂ ತೊಗೊಳ್ತೀರ ಮಿ. ಸುಂದರಂ...' ಅಂತಿದ್ದಾನೆ ಆ ಅಯೋಗ್ಯ ಬಾಸ್. ಅವನಿಗೆ ನಾನೇನು ಅರವತ್ತು ತುಂಬಿದಂತೆ ಕಾಣಿಸ್ತಿದ್ದೀನಾ. 'ನೋಡಿ ಮಿ. ಸುಂದರಂ... ಈಗ ಯಂಗ್ ಜನರೇಶನ್ ಬಹಳ ಡೈನಮಿಕ್. ಯು ನೋ... ನಮ್ಮ ಅಸೈನ್‌ಮೆಂಟ್ಸ್ ಕೂಡ ಹೆಚ್ಚಾಗ್ತ ಇದೆ. **in the interest of the company...**' ಎಂದು ಭುಜ ತಟ್ತಾನೆ ಅಯೋಗ್ಯ. ನಾನೂ ಕೂಡ ಯಂಗ್ ಆಗಿಯೇ ಬಂದಿದ್ದು... ನಿನ್ನ ಕಂಪೆನಿಯಲ್ಲೇ ಕಣಯ್ಯ ನನ್ನ ಕೂದಲು ಬಿಳಿ ಆಗಿದ್ದು ಅಂತ ಹೇಳಲು ಅವನಿಗೆ ಬಾಯಿ ತುಂಬಿ ಬಂದರೂ ಉಗುಳು ನುಂಗಿ, ಪೆದ್ದು ನಗೆ ನಕ್ಕು 'ಫ್ಯಾಮಿಲಿ ಕಮಿಟ್ ಮೆಂಟ್ಸ್ ಸರ್... **right now I can't think of it**' ಅಂದು ಬಂದಿದ್ದ. ಹೀಗೆ ಯೋಚಿಸ್ತಾನೆ ಕಂಪ್ಯೂಟರ್ ಮುಂದೆ ಕುಳಿತು ಇಂಟರ್‌ನೆಟ್‌ನಿಂದ ಹಾಡು ಕಾಪಿ ಮಾಡಿಕೊಂಡ ಸುಂದರಂ ಅದನ್ನೇ ಓದಿದ.

'ಶ್ರೀಗಂಧ ನಾನಾಗೆ ಹುಟ್ಟುತ್ತಿದ್ದಿರೆ ಆಗ ನಿನ್ನ ಪಾದಾರ್ಚನೆಗೆ ಸವೆಯುತ್ತಿದ್ದೆ
ಗಿಡದಲ್ಲಿ ಹೂವಾಗಿ ಹುಟ್ಟುತ್ತಿದ್ದಿರೆ ಆಗ ಪಾದಪೂಜೆಯ ಸಮಯ ಬಳಿಸೇರುತ್ತಿದ್ದೆ...||
ಯಾವೊಂದು ನದಿಯಲ್ಲೀ ನೀರಾಗಿ ಜನಿಸಿದರೆ ನಿನ್ನ ಪಾದ ತೊಳೆವಲ್ಲಿ ನಾನೊದಗುತ್ತಿದ್ದೆ
ನಿನ್ನ ಭಜಿಸುವ ದುಂಬಿ ನಾನಾಗಿ ಜನಿಸಿದರೆ ಪದಕಮಲ ಮಕರಂದ ಹೀರುತ್ತಿದ್ದೆ
ನಿನ್ನ ನಿಜ ಭಕ್ತನೂ ನಾನು ಜನಿಸಿದರಾಗ ನಿನ್ನ ಪಾದದೂಳಿನಲಿ ಹೊರಳಾಡುತ್ತಿದ್ದೆ||...

ಓದುತ್ತಾ ಅವನಿಗನ್ನಿಸಿತು... ಹೌದು. ಈ ಮನುಷ್ಯ ಜನ್ಮವೇ ಕೇಡು. ಶ್ರೀಗಂಧವೋ, ದುಂಬಿಯೋ, ನೀರೋ, ಹೂವೋ... ಏನಾದರೂ ಆಗಿ ಹುಟ್ಟಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಒಂದುವೇಳೆ ದುಂಬಿ ಆಗಿದ್ದರೆ ನಾನೇನು ಮಾಡ್ತಿದ್ದೆ... ಆ ಬಾಸ್‌ನ ಕಚ್ಚಿ ಸೇಡು ತೀರಿಸಿಕೊಳ್ಳುತ್ತಿದ್ದೆ. ನೀರಾಗಿದ್ದರೆ... ಅವನು ಸ್ನಾನ ಮಾಡಲು ಹೋದಾಗೆಲ್ಲ ನಿಂತು ಹೋಗಿ ಕಷ್ಟ ಕೊಡುತ್ತಿದ್ದೆ. ಹೂವಾಗಿದ್ದರಂತೂ ಅವನ ಫೋಟೊ ಮೇಲೆ ಕುಳಿತು ಆನಂದಪಡುತ್ತಿದ್ದೆ... ಹೀಗೆಲ್ಲಾ ಯೋಚಿಸ್ತಾ ಅವನ ಮನಸ್ಸೆಲ್ಲ ಆನಂದದಿಂದ ತುಂಬಿಕೊಂಡಿತು.

ಒಳಗೆ ಮಗಳ ಆರ್ಭಟ ಕೇಳಿಬರುತ್ತಿತ್ತು. 'ಹೋಗಮ್ಮ ಯಾವಾಗ ನೋಡಿದ್ರೂ ಬಸ್‌ನಲ್ಲಿ ಹೋಗು ಅಂತೀಯ. ನನ್ನ ಫ್ರೆಂಡ್ಸ್ ಎಲ್ಲಾ ಜುಂ ಅಂತ ಸ್ಕೂಟಿನಲ್ಲಿ ಬರ್ತಾರೆ. ನಾನು ಮಾತ್ರ... ಒಂದು ದಿನಾನೂ ಹಾಗೆ ಎಂಜಾಯ್ ಮಾಡೋಕೆ ಆಗೋಲ್ಲ.'

'ಅದೆಲ್ಲ ಇರ್ಲಿ. ಇಲ್ಲಿ ಸ್ವಲ್ಪ ಕಾಯಿ ತುರಿದು ಕೊಡು. ಪಲ್ಯಕ್ಕೆ ಹಾಕಬೇಕು' ಇವಳ ನಿರ್ವಿಕಾರ ಧ್ವನಿ.